ದಿಃ 04.07.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃಶ್ರೀ ಎ.ಎನ್ ರವರಿಂದಃ**

ಅಸಲು ದಾವೆ ಸಂಖ್ಯೆ  161/2011 ಅನ್ನು ಸರ್ಕಾರದ ವಿರುದ್ಧ ದಾವೆ ದಾಖಲಿಸಿದ್ದೇನೆ ಎಂದರೆ ಸರಿ. ಸದರಿ ದಾವೆಯಲ್ಲಿ ಸ್ವತ್ತು ಜಪ್ತಿ ಆಗಿ ಆ ಸ್ವತ್ತನ್ನು ನಾನು ಖರೀದಿ ಮಾಡಿದ್ದೇನೆ ಎಂದರೆ ಸರಿ. ನಾನು ಚಿತ್ರಾವತಿ ನದಿಯ ಜಾಗವನ್ನು ಹೋತ್ತುವರಿ ಮಾಡಿದ್ದೇನೆ ಎಂದು ತಹಶೀಲ್ದಾರ್ ರವರು ದಿಃ 21.09.2011 ರಂದು ನೋಟೀಸ್ ಕೊಟ್ಟಿದ್ದರು ಎಂದರೆ ಸರಿ.  ನಂತರ ಸ್ವತ್ತನ್ನು ತಹಶೀಲ್ದಾರ್ ರವರು ಸರ್ವೇ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ.  ಸರ್ವೇಯಲ್ಲಿ ನಾನು ಹೋತ್ತುವರಿ ಮಾಡಿರುವುದು ಕಂಡು ಬಂದಿದೆ ಎಂದರೆ ಸರಿಯಲ್ಲ.  ನಾನು ಹೋತ್ತುವರಿ ಮಾಡಿಕೊಂಡಿಲ್ಲ ಎಂದು ನಾನು ಅಸಲು ದಾವೆ ಸಂಖ್ಯೆ 161/2011 ಅನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

2. ನಾನು ಸ್ವತ್ತನ್ನು ಹೋತುವರಿ ಮಾಡಿದ ವಿಷಯವನ್ನು ಬಹಿರಂಗ ಪಡಿಸಿದ್ದರಿಂದ ನಾನು ಶಿವಪ್ಪ, ಮುದ್ರರಾಜು ಮತ್ತು ರಾಮಚಂದ್ರರೆಡ್ಡಿ ರವರು ನಿಪಿ 1 ಮತ್ತು 2 ಅನ್ನು ಸೃಷ್ಟಿಮಾಡಿದ್ದೇವೆ ಎಂದರೆ  ಸರಿಯಲ್ಲ.  ನಿಪಿ 1 ಮತ್ತು 2 ಕ್ಕೆ ಮುದ್ದುರಾಜು ಸಹಿ ಮಾಡಿದ್ದಾರೆ. ಮುದ್ದುರಾಜು ರವರು ಕನರಾ ಬ್ಯಾಂಕ್ ನಲ್ಲಿ ಲೋನ್ ತೆಗೆದುಕೊಂಡು ಅವರ ಸ್ವತ್ತನ್ನು ಬ್ಯಾಂಕ್ ಗೆ ಆಧಾರ ಮಾಡಿದ್ದು ಬ್ಯಾಂಕಿಗೆ ಮೋಸ ಮಾಡಿ ಮುದ್ದುರಾಜು ಮೂಖಾಂತರ ಆ ಸ್ವತ್ತನ್ನು ನಾನು ಖರೀದಿಸಿದ್ದೇನೆ ಎಂದರೆ ಸುಳ್ಳು. ಮುದ್ದುರಾಜು ಮತ್ತು ನಾನು ಚೀಟಿ ವ್ಯವಹಾರ ಮಾಡಿ ಸುಮಾರು ಜನಗಳಿಗೆ ಮೋಸ ಮಾಡಿದ್ದೇವೆ ಎಂದರೆ ಸರಿಯಲ್ಲ. ಮುಧ್ರಾಜು ಅವರನ್ನು ಬಚ್ಚಿಟ್ಟು ಅವರ ತಮ್ಮ ವೀರಭದ್ರಪ್ಪ ನಿಂದ ಚೆಕ್ಗಳನ್ನು ಪಡೆದು ಈ ರೀತಿ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ಮುದ್ದುರಾಜು ಅವರನ್ನು ಈ ದಾವೆಯಲ್ಲಿ ಸಾಕ್ಷಿಯನ್ನಾಗಿ ಕರೆಸಲು ಅವರ

ವಿಳಾಸ ತಿಳಿದರೆ ಕರೆಸುತ್ತೇನೆ. ಮುದ್ರಾಜು ಮತ್ತು ನನ್ನ ನಡುವೆ ಸಂಪರ್ಕ ಇದ್ದು ಅವರನ್ನು ನ್ಯಾಯಾಲಯಕ್ಕೆ ಕರೆಸಲಾಗುವುದಿಲ್ಲ ಎಂದರೆ ಸುಳ್ಳು. ನಾನು, ರಾಮಚಂದ್ರಪ್ಪ ಮತ್ತು ಮುದ್ದುರಾಜು ರೀಯಲ್ ಎಸ್ಟೇಟ್ ಮತ್ತು ಚೀಟಿ ವ್ಯವಹಾರ ನಡೆಸುತ್ತಿದ್ದೇವೆ ಎಂದರೆ ಸರಿಯಲ್ಲ. ರಾಮಚಂದ್ರಪ್ಪ ಮತ್ತು ನಾನು ಅದಲು ಬದಲು ಕ್ರಯ ಪತ್ರವನ್ನು 2006 ರಲ್ಲಿ ಮಾಡಿದ್ದೇವೆ ಎಂದರೆ ಸರಿ. ಸರ್ಕಾರಕ್ಕೆ ಮೋಸ ಮಾಡುವ ಉದ್ದೇಶದಿಂದ ಅದಲು ಬದಲು ಕ್ರಯ ಪತ್ರವನ್ನು ಮಾಡಿಕೊಂಡು ಅದಕ್ಕೆ ರಾಮಚಂದ್ರಪ್ಪ ಮತ್ತು ಪತ್ರ ಬರಹಗಾರ ಇವರ ಸಹಿ ಮಾಡಿಸಿದ್ದೇನೆ ಎಂದರೆ ಸರಿಯಲ್ಲ.

4. ಶಿವಪ್ಪ ರವರು ನಿಪಿ 1 ಮತ್ತು 2 ರಲ್ಲಿ ಸಿಲ್ ಹಾಕಿದ್ದಾರಾ ಅಥವಾ ಇಲ್ಲವಾ ನೆನಪಿಲ್ಲ. ಪ್ರೊನೋಟ್ ನಲ್ಲಿ ಪ್ರತಿವಾದಿ 2 ಸಹಿ ಮಾಡಿದ್ದಾರೆ. ಗಂಗಾರೆಡ್ಡಿ ಅವರನ್ನು ನ್ಯಾಯಲಯಕ್ಕೆ ಕರೆದುಕೊಂಡು ಬಂದು ಸಾಕ್ಷ್ಯ ಮಾಡಿಸಲು ಆಗುತ್ತದೆ. ಗಂಗಾರೆಡ್ಡಿ ಅವರ ಸಾಕ್ಷ್ಯ ಮಾಡಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. ನಿಪಿ 1 ಮತ್ತು 2 ಅನ್ನು ಪ್ರತಿವಾದಿ ತಂದಿರುತ್ತಾರೆ. ಪ್ರತಿವಾದಿ ಸ್ಟಾಂಪ್ ಅನ್ನು ತಂದಿರುತ್ತಾರೆ ಎಷ್ಟು ಸ್ಟಾಂಪ್ ತಂದಿರುತ್ತಾರೆ ನೆನಪಿಲ್ಲ. ನಾನು ಹಲವಾರು ಜನರ ವಿರುದ್ಧ ಪ್ರಕರಣವನ್ನು ದಾಖಲಿಸಿದ್ದು ನ್ಯಾಯಲಾಯದಲ್ಲಿ ಸಾಕ್ಷಿ ಹೇಳುವುದು ಗೊತ್ತಿರುವುದರಿಂದ ಪ್ರತಿವಾದಿಯರ ವಿರುದ್ಧ ದಾಖಲೆಯನ್ನು ಸೃಷ್ಟಿ ಮಾಡಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸಿ ಸಿ ಸಂಖ್ಯೆ 65/2020 ಅನ್ನು ಬಿ ಶ್ರೀನಿವಾಸಿ ರವರ ವಿರುದ್ಧ ದಾಖಲಿಸಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಶ್ರೀನಿವಾಸ್ ನನಗೆ ಹಣ ಕೊಡಬೇಕು. ಸಿ.ಸಿ ನಂ. 27/2020 ಅನ್ನು ಮುರುಳಿಕೃಷ್ಣ ನನ್ನ ವಿರುದ್ಧ ದಾಖಲಿಸಿದ್ದಾರೆ ಎಂದರೆ ಸರಿ. ಸುಳ್ಳು ಪ್ರಕರಣ ದಾಖಲಿಸಿದಾದರೆ. ಅಸಲು ದಾವೆ ಸಂಖ್ಯೆ 51/2016 ಅನ್ನು ಸರ್ಕಾರದ ವಿರುದ್ಧ ದಾಖಲಿಸಿದ್ದೇನೆ ಎಂದರೆ ಹೈ ಕೋರ್ಟ್‌ನಲ್ಲಿ ದಾಖಲಿಸಿದ್ದೇನೆ. ಅಸಲು ದಾವೆ ಸಂಖ್ಯೆ 11/2021, 63/2016,13/17, 11/21, ನಾನು ದಾಖಲಿಸಿದ್ದೇನೆ ಎಂದರೆ ಸರಿ.

ಅಸಲು ದಾವೆ ಸಂಖ್ಯೆ 61/21 ಅನ್ನು ಪ್ರಿಯಾಂಕ ಇವರು ನನ್ನ ವಿರುದ್ಧ ದಾಖಲಿಸಿದ್ದಾರೆ ಎಂದರೆ ಸರಿ.

**5.** ನಿಪಿ 1 ಮತ್ತು 2 ರಲ್ಲಿ ಪ್ರತಿವಾದಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನನಗೂ ಮತ್ತು ಪ್ರತಿವಾದಿಯ ನಡುವೆ ಯಾವುದೇ ಹಣದ ವ್ಯವಹಾರ ಇರಲಿಲ್ಲ ಎಂದರೆ ಸರಿಯಲ್ಲ. ದಿಃ 16.012.2015 ರಂದು ನಪಿ 1 ಮತ್ತು 2 ಅನ್ನು ಬರೆಯಲಾಗಿತ್ತು. ಪ್ರತಿವಾದಿಯಿಂದ ಹಣವನ್ನು ಲಪಟಾಯಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃಃ ಇಲ್ಲಾ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಗಣಕೀಕರಣಗೊಳಿಸಲಾಯಿತು.)

ಓ ಹೇ ಕೇ ಸ ಇದೆ

ಸಿಜೆ ಮತ್ತು ಜೆಎಂಎಫ್ ಸಿ. ,
ಬಾಗೇಪಲ್ಲಿ